ಓ.ಎಸ್ .ನಂ. 91/2022 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 19.3.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ಆರ್ ವಕೀಲರಿಂದಃ**

ವಾದಿ ಬ್ಯಾಂಕಿನ ಪರವಾಗಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ತಿಳುವಳಿಕೆ ಇರುತ್ತದೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ಈ ಸಾಲಕ್ಕೆ ಸಂಬಂಧಪಟ್ಟ ಬೇರೆ ದಾಖಲೆಗಳು ಇರುತ್ತದಾ ಎಂದರೆ ಸಾಕ್ಷಿದಾರರು ಪರಿಶೀಲಿಸಿ ಹೇಳಬೇಕಾಗುತ್ತದೆ ಎನ್ನುವರು. ದಾವಪತ್ರದ ಖಂಡಿಕೆ 4 ಮತ್ತು 5 ರಲ್ಲಿ ಹೇಳಿರುವ ಎರಡು ಲೋನ್ ಅಕೌಂಟುಗಳು ಬೇರೆ ಬೇರೆ ಎಂದರೆ ಸರಿ. ಎರಡು ಸಾಲಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಅರ್ಜಿಗಳನ್ನು ಪಡೆದುಕೊಂಡಿರುತ್ತೇವೆ. ಅದೇ ರೀತಿ ಎರಡು ಸಾಲಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ. ಮೇಲೆ ಹೇಳಿದ ಎರಡು ಸಾಲಗಳು ಪ್ರತ್ಯೇಕ ಸಾಲಗಳು ಆಗಿರುತ್ತದೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವ ದಾಖಲೆಗಳಲ್ಲಿ 1 ನೇ ಪ್ರತಿವಾದಿಯು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ದಾಖಲಾತಿ ಪ್ರಕಾರ ಎಲ್ಲ ದಾಖಲೆಗಳಿಗೂ ಸಹಿ ಮಾಡಿರುತ್ತಾರೆ ಎನ್ನುವರು. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಿಗೆ 1 ನೇಪ್ರತಿವಾದಿಯು ಸಹಿ ಮಾಡಿದಾಗ ಅವುಗಳನ್ನು ಭರ್ತಿ ಮಾಡಿತ್ತಾ ಇಲ್ಲವಾ ಎಂದು ಹೇಳಲು ಸಾಧ್ಯವಿರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಹಿಂದಿನ ಮ್ಯಾನೇಜರ್ ಬಳಿ ವಿಚಾರಿಸಿದಾಗ ಎಲ್ಲವನ್ನು ಭರ್ತಿ ಮಾಡಲಾಗಿತ್ತು ಎಂದು ಹೇಳಿರುತ್ತಾರೆ ಎನ್ನುವರು. ಸಾಲ ನೀಡುವ ಸಮಯದಲ್ಲಿ ಇದ್ದ ಮ್ಯಾನೇಜರ್ ರವರನ್ನು ನಾನು ವಿಚಾರಿಸಿರುವುದಿಲ್ಲ, ನನ್ನ ಹಿಂದಿನ ಮ್ಯಾನೇಜರ್ ರವರ ಬಳಿ ವಿಚಾರಿಸಿರುತ್ತೇನೆ. ನಾನು ಸರಗೂರಿನ ಕೆನರಾ ಬ್ಯಾಂಕಿಗೆ ಬಂದು 8 ತಿಂಗಳಾಗಿರುತ್ತದೆ. ಸಾಲ ಮಂಜೂರು ಮಾಡಿದ ಸಮಯದಲ್ಲಿದ್ದ ಮ್ಯಾನೇಜರ್ ರವರ ಬಳಿ ದಾವಪತ್ರದಲ್ಲಿ ಹೇಳಿರುವ ಸಾಲದ ಬಗ್ಗೆ ವಿಚಾರಿಸಿರುವುದಿಲ್ಲ. ಅವರ ಬಳಿ ವಿಚಾರಿಸಿ ಸಾಕ್ಷಿ ನುಡಿಯುತ್ತೇನೆ ಎನ್ನುವರು. ಯಾವುದೇ ಸಾಲ ನೀಡುವಾಗ ಸಾಲಗಾರರಿಂದ ಪಡೆದುಕೊಂಡ ದಾಖಲೆಗಳ ಬಗ್ಗೆ ಚೆಕ್‌ಸ್ಲಿಪ್ ಮಾಡುತ್ತೇವೆ. ಈ ದಾವೆಗೆ ಸಂಬಂಧಪಟ್ಟಂತೆ ಚೆಕ್‌ಸ್ಲಿಪ್‌ನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿದಾರರು ನಾನು ಪರಿಶೀಲನೆ ಮಾಡಿ ಹೇಳುತ್ತೇನೆ ಎನ್ನುವರು. ಸದರಿ ಚೆಕ್‌ಸ್ಲಿಪ್‌ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿದಾರರು

ನೋಡಿ ಹೇಳುತ್ತೇನೆ ಎನ್ನುವರು. ನಾವು ಯಾವುದೇ ಸಾಲ ನೀಡುವಾಗ ಅದಕ್ಕೆ ಇನ್ಸುರೆನ್ಸ ಮಾಡಿಸುತ್ತೇವೆ ಎಂದರೆ ಸಾಕ್ಷಿದಾರರು ಎಲ್ಲ ಸಾಲಗಳಿಗೆ ಮಾಡುವುದಿಲ್ಲ, ಬೆಳೆ ಸಾಲಕ್ಕೆ ಇನ್ಸುರೆನ್ಸ ಇರುವುದಿಲ್ಲ ಎನ್ನುವರು. ಈ ದಾವೆಯಲ್ಲಿ ಹೇಳಿರುವ ಎರಡು ಸಾಲಗಳಿಗೆ ಇನ್ಸುರೆನ್ಸ ಮಾಡಿರುವುದಿಲ್ಲ. ನಂತರ ಸಾಕ್ಷಿದಾರರು ಮುಂದುವರಿದು ಪರಿಶೀಲನೆ ಮಾಡಿ ಹೇಳಬೇಕಾಗುತ್ತದೆ ಎನ್ನುವರು. ಯಾವುದೇ ಸಾಲ ನೀಡುವಾಗ ಅರ್ಜಿ ಪಡೆದುಕೊಂಡು ಸಾಲ ನೀಡುತ್ತೇವೆ ಎಂದರೆ ಸರಿ. ಸಾಲದ ಅರ್ಜಿಯಲ್ಲಿ ಯಾರ್ಯಾರಿಗೆ ಸಾಲ ನೀಡುತ್ತಿದ್ದೇವೆ ಎಂದು ನಮೂದಾಗುತ್ತದೆ. ಈ ದಾವೆಯಲ್ಲಿ ಹೇಳಿರುವ ಸಾಲವನ್ನು ಒಬ್ಬರಿಗೆ ನೀಡಿರುತ್ತೀರಾ ಅಥವಾ ಜಂಟಿಯಾಗಿ ನೀಡಿರುತ್ತೀರಾ ಎಂದರೆ ಸಾಕ್ಷಿದಾರರು ಜಿ.ಪಿ.ಎ ಮೇಲೆ ನೀಡಿದ್ದು ನೋಡಿ ಹೇಳಬೇಕು ಎನ್ನುವರು. ನಿಪಿ1 ರ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ವೈಯಕ್ತಿಕವಾಗಿ ಜಿ.ಪಿ.ಎ ಆಧಾರದ ಮೇಲೆ ಸಾಲ ಮಂಜೂರಾಗಿರುತ್ತದೆ. ನಿಪಿ1 ರ ಪ್ರಕಾರ 1 ನೇ ಪ್ರತಿವಾದಿ ಹೆಸರಿಗೆ ವೈಯಕ್ತಿಕವಾಗಿ ಸಾಲ ಮಂಜೂರಾಗಿರುತ್ತದೆ. ನಾನು ಜಿ.ಪಿ.ಎ ಆಧಾರದ ಮೇಲೆ ನಿಪಿ1 ಸಾಲದ ಅರ್ಜಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಯಾರೆಲ್ಲ ಜಿ.ಪಿ.ಎ ನೀಡಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಸಾಕ್ಷಿದಾರರು ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿ ನುಡಿಯುವುದಾಗಿ ಹೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.